# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | : | **293** |
| **ಮಾನ್ಯ ಸದಸ್ಯರ ಹೆಸರು** | : | **ಶ್ರೀ ತಿಪ್ಪಣ್ಣಪ್ಪ ಕಮಕನೂರು (ವಿಧಾನ ಸಭೆಯಿಂದ ಚುನಾಯಿತರಾದವರು)** |
| **ಉತ್ತರಿಸುವ ದಿನಾಂಕ** | : | **29.01.2026** |
| **ಉತ್ತರಿಸುವ ಸಚಿವರು** | : | **ಗೃಹ ಸಚಿವರು** |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕಳೆದ ಮೂರು ವರ್ಷಗಳಲ್ಲಿ ರಾಜ್ಯದಲ್ಲಿ ದಾಖಲಾದ ಸೈಬರ್ ಅಪರಾಧ ಪ್ರಕರಣಗಳ ಸಂಖ್ಯೆ ಎಷ್ಟು; (ವರ್ಷವಾರು ಮತ್ತು ಜಿಲ್ಲಾವಾರು ಮಾಹಿತಿ ನೀಡುವುದು) | ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ ದಾಖಲಾದ ಸೈಬರ್ ಅಪರಾಧ ಪ್ರಕರಣಗಳ ಸಂಖ್ಯೆ, ವಂಚನೆ ಮೊತ್ತ ಮತ್ತು ರಿಕವರಿ ಮೊತ್ತದ ವರ್ಷವಾರು ಮತ್ತು ಜಿಲ್ಲಾವಾರು ಮಾಹಿತಿಯನ್ನು **ಅನುಬಂಧದಲ್ಲಿ** ಒದಗಿಸಲಾಗಿದೆ. |
| ಆ) | ಈ ಪ್ರಕರಣಗಳಲ್ಲಿ ಸಾರ್ವಜನಿಕರು ಕಳೆದುಕೊಂಡ ಒಟ್ಟು ಮೊತ್ತ ಎಷ್ಟು ಮತ್ತು ಅದರಲ್ಲಿ ಎಷ್ಟು ಮೊತ್ತವನ್ನು ಪೊಲೀಸರು ಯಶಸ್ವಿಯಾಗಿ ವಾಪಸ್ ಕೊಡಿಸಿದ್ದಾರೆ; | |
| ಇ) | ಸೈಬರ್ ಅಪರಾಧಗಳ ಪತ್ತೆ ಹಚ್ಚುವಿಕೆ ದರ (Detection Rate) ಕಡಿಮೆಯಾಗಲು ಕಾರಣಗಳೇನು; ಇದನ್ನು ಸುಧಾರಿಸಲು ಇಲಾಖೆ ಕೈಗೊಂಡಿರುವ ವಿಶೇಷ ಕ್ರಮಗಳೇನು? | **ಸೈಬರ್ ಅಪರಾಧಗಳ ಪತ್ತೆ ಹಚ್ಚುವಿಕೆ ದರ (Detection Rate) ಕಡಿಮೆಯಾಗಲು ಕಾರಣಗಳು ಈ ಕೆಳಕಂಡಂತಿವೆ:**<br>➢ ಸೈಬರ್ ವಂಚಕರು VPN, ಪ್ರಾಕ್ಸಿ, TOR ಮುಂತಾದ ತಂತ್ರಜ್ಞಾನಗಳನ್ನು ಬಳಸಿ ತಮ್ಮ IP ವಿಳಾಸ ಮತ್ತು ಸ್ಥಳವನ್ನು ಮರೆಮಾಚುತ್ತಾರೆ.<br>➢ ಸೈಬರ್ ವಂಚಕರು ಕಳುವಾದ ಅಥವಾ ಮ್ಯೂಲ್ ಬ್ಯಾಂಕ್ ಖಾತೆಗಳು ಮತ್ತು ಫೇಕ್ SIM ಕಾರ್ಡ್‌ಗಳನ್ನು ಬಳಸಿ ಹಣಕಾಸು ವ್ಯವಹಾರಗಳನ್ನು ನಡೆಸುತ್ತಾರೆ.<br>➢ ಸೈಬರ್ ವಂಚಕರು ಹಲವಾರು ಪ್ರಕರಣಗಳಲ್ಲಿ |

| | | |
|---|---|---|
| | | ವಂಚಕರು ವಿದೇಶಗಳಿಂದ ಅಥವಾ ಅಂತರರಾಜ್ಯಗಳಿಂದ ಕಾರ್ಯನಿರ್ವಹಿಸುವ ಸಂಘಟಿತ ಗ್ಯಾಂಗುಗಳ ಭಾಗವಾಗಿರುತ್ತಾರೆ.<br>➢ ಸೈಬರ್ ವಂಚಕರು VOIP, ಡಾರ್ಕ್ ವೆಬ್ ಮತ್ತು ಅನ್ಯ ಮಾರ್ಗಗಳಿಂದ ಡಿಜಿಟಲ್ footprint ಕಡಿಮೆ ಮಾಡುವ ತಂತ್ರಗಳನ್ನು ಬಳಸುತ್ತಾರೆ.<br>➢ ಸೈಬರ್ ವಂಚಕರು Cryptocurrency, e-wallet ಮತ್ತು gift card ಮೂಲಕ ಹಣ ವರ್ಗಾವಣೆ ಮಾಡುವುದರಿಂದ ಹಣದ ಹಾದಿ ಪತ್ತೆ ಹಚ್ಚುವುದು ಕಷ್ಟವಾಗುತ್ತದೆ.<br>➢ ಸೈಬರ್ ವಂಚನೆಗೆ ಒಳಗಾದವರು ಪ್ರಕರಣ ದಾಖಲಿಸುವಲ್ಲಿ ವಿಳಂಬ ಮಾಡುವುದರಿಂದ, ವಂಚಕರು ಹಣವನ್ನು ಬೇಗನೆ ಬೇರೆ ಖಾತೆಗಳಿಗೆ ವರ್ಗಾಯಿಸುತ್ತಾರೆ.<br>➢ ಸೈಬರ್ ವಂಚಕರು ತಮ್ಮ ಕೆಲಸವನ್ನು ವಿಭಜಿತ ಮತ್ತು ಸಂಘಟಿತ ರೀತಿಯಲ್ಲಿ ನಡೆಸುವ ಕಾರಣ ಒಬ್ಬರನ್ನು ಬಂಧಿಸಿದರೂ ಸಂಪೂರ್ಣ ಜಾಲ ಪತ್ತೆಯಾಗುವುದಿಲ್ಲ.<br>➢ ಸೈಬರ್ ವಂಚಕರು ಸಾಮಾಜಿಕ ಜಾಲತಾಣಗಳಲ್ಲಿ ನಕಲಿ ಡಿಜಿಟಲ್ ಗುರುತಿನ (fake identity) ಬಳಕೆಯಿಂದ, ನಿಜವಾದ ವ್ಯಕ್ತಿಯನ್ನು ಪತ್ತೆಹಚ್ಚುವುದು ಸವಾಲಾಗಿದೆ.<br>➢ ಸೈಬರ್ ವಂಚಕರು ಹೆಚ್ಚು ತಾಂತ್ರಿಕಜ್ಞಾನ ಹೊಂದಿರುವುದರಿಂದ, ತನಿಖೆಗೆ ವಿಶೇಷ ಸೈಬರ್ ಫೊರೆನ್ಸಿಕ್ ಸಾಮರ್ಥ್ಯ ಅಗತ್ಯವಾಗುತ್ತದೆ.<br>➢ ಸೈಬರ್ ಅಪರಾಧ ಒಂದು ರಾಜ್ಯದಲ್ಲಿ ನಡೆಯಬಹುದು, ಸರ್ವರ್ ಇನ್ನೂ ಬೇರೆ ರಾಜ್ಯ/ದೇಶದಲ್ಲಿ ಇರಬಹುದು ಎಂಬ Jurisdiction ಸಮಸ್ಯೆಗಳು ತನಿಖೆ ಜಟಿಲವಾಗಿಸುತ್ತವೆ. |

| | | |
|---|---|---|
| | | **ಸೈಬರ್ ಅಪರಾಧಗಳ ಪತ್ತೆ ಹಚ್ಚಲು ಹಾಗೂ ಸುಧಾರಿಸಲು ಇಲಾಖೆ ಕೈಗೊಂಡಿರುವ ವಿಶೇಷ ಕ್ರಮಗಳು ಈ ಕೆಳಕಂಡಂತಿದೆ.**<br><br>➢ ರಾಜ್ಯದಲ್ಲಿ ಸಿಐಡಿ ಮತ್ತು ಬೆಂಗಳೂರು ನಗರ ಸೇರಿದಂತೆ ಒಟ್ಟು **45** ಸೈಬರ್ ಕ್ರೈಂ ಪೊಲೀಸ್ ಠಾಣೆಗಳು (CCPS- Cyber Crime Police Station) ಕರ್ತವ್ಯ ನಿರ್ವಹಿಸುತ್ತಿವೆ. **ಡಿವೈಎಸ್ಪಿ/ಎಸಿಪಿ** ರವರು ಸೈಬರ್ ಕ್ರೈಂ ಪೊಲೀಸ್ ಠಾಣೆ SHO ಆಗಿರುತ್ತಾರೆ. ಈ ಠಾಣೆಗಳು ಸೈಬರ್ ಅಪರಾಧಗಳ ತನಿಖೆಗೆ ಮಾತ್ರ ಮೀಸಲಾಗಿದ್ದು, **DGP ಸೈಬರ್ ಕಮಾಂಡ್** ರವರು ಸೈಬರ್ ಕ್ರೈಂ ಪೊಲೀಸ್ ಠಾಣೆಗಳ ಕಮಾಂಡಿಂಗ್ ಅಧಿಕಾರಿಯಾಗಿರುತ್ತಾರೆ.<br><br>➢ ಅಲ್ಲದೇ, ಸೈಬರ್ ಪ್ರಕರಣಗಳನ್ನು ಇತ್ಯರ್ಥಪಡಿಸಲು ಆಧುನಿಕ ತಂತ್ರಜ್ಞಾನ ಹೊಂದಿರುವ ಉಪಕರಣಗಳನ್ನು ಬಳಸಲಾಗುತ್ತಿದ್ದು, ಹಾಗೂ ಆಧುನಿಕ ವಿದ್ಯುನ್ಮಾನ ತಾಂತ್ರಿಕ ಉಪಕರಣಗಳನ್ನು ಬಳಸಲು ಸಿಬ್ಬಂದಿಗಳಿಗೆ ವಿಶೇಷ ತರಬೇತಿಯನ್ನು ಸಹ ಒದಗಿಸಲಾಗಿರುತ್ತದೆ. ಸಿಐಡಿ ಕಛೇರಿಯಲ್ಲಿ ಈಗಾಗಲೇ ಸಿ.ಎಫ್.ಯು (ಸೈಬರ್ ಫಾರೇನ್ಸಿಕ್ ಯುನಿಟ್) ವಿಭಾಗವನ್ನು ಹಿರಿಯ ಅಧಿಕಾರಿಗಳ ಉಸ್ತುವಾರಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಸಿ.ಎಫ್.ಯು ವಿಭಾಗದ ಸೈಬರ್ ಲ್ಯಾಬ್‌ನಲ್ಲಿ ಆಧುನಿಕ ತಂತ್ರಜ್ಞಾನ ಸಲಕರಣೆಗಳನ್ನು ಬಳಸಿಕೊಂಡು ಸಿಎಫ್‌ಯು ವಿಭಾಗವು ಕರ್ನಾಟಕ ರಾಜ್ಯದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಪೊಲೀಸ್ ಠಾಣೆಗಳ ಪ್ರಕರಣಗಳಲ್ಲಿನ ತನಿಖೆಯಲ್ಲಿ ತಾಂತ್ರಿಕ ಸಹಾಯವನ್ನು ಒದಗಿಸಲಾಗುತ್ತಿದೆ.<br><br>➢ ಸೈಬರ್ ಅಪರಾಧಗಳನ್ನು ತಡೆಗಟ್ಟುವ ಸಲುವಾಗಿ ಸಿಐಡಿ ಕಛೇರಿಯಲ್ಲಿ Centre for Cyber Crime Investigation Training & |

| | | |
|---|---|---|
| | | Research" ಘಟಕವನ್ನು ಪ್ರಾರಂಭಿಸಲಾಗಿದ್ದು, ಪೊಲೀಸ್ ಇಲಾಖೆಯ ಅಧಿಕಾರಿ ಮತ್ತು ಸಿಬ್ಬಂದಿಯವರುಗಳಿಗೆ ಸೈಬರ್ ಅಪರಾಧಗಳನ್ನು ತನಿಖೆ ಮತ್ತು ಪತ್ತೆ ಮಾಡುವ ಬಗ್ಗೆ ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಿ, ತರಬೇತಿಯನ್ನು ನೀಡಲಾಗುತ್ತಿರುತ್ತದೆ.<br><br>➢ ಹ್ಯಾಕಿಂಗ್ ಹಾಗೂ ಇತರೆ ಸೈಬರ್ ಅಪರಾಧ ಪ್ರಕರಣಗಳನ್ನು ಪತ್ತೆ ಹಚ್ಚಲು Drone Forensics, RAID Forensics, Wearable Device Forensics, Cloud Forensics, Crypto Currency Tracing and Investigation ನಂತಹ ಸುಧಾರಿತ ತರಬೇತಿಗಳನ್ನು ಹಾಗೂ ಆಧುನಿಕ ವಿದ್ಯುನ್ಮಾನ ತಾಂತ್ರಿಕ ಉಪಕರಣಗಳನ್ನು ಬಳಸಲು ಅಧಿಕಾರಿ/ಸಿಬ್ಬಂದಿಗಳಿಗೆ ವಿಶೇಷ ತರಬೇತಿಗಳನ್ನು ಸಹ ನೀಡಲಾಗುತ್ತಿರುತ್ತದೆ.<br><br>➢ 08 ಸೈಬರ್ ಸೆಕ್ಯೂರಿಟಿ ಅನಾಲಿಸ್ಟ ಹಾಗೂ 08 ಡಿಜಿಟಲ್ ಫಾರೆನ್ಸಿಕ್ ಅನಾಲಿಸ್ಟ್ ಒಟ್ಟು 16 ಸೈಬರ್ ತಾಂತ್ರಿಕತಜ್ಞರನ್ನು ಹೊರಗುತ್ತಿಗೆ ಆಧಾರದ ಮೇರೆಗೆ ನಿಯೋಜಿಸಲಾಗಿರುತ್ತದೆ.<br><br>➢ ಇದರಲ್ಲಿ 06 ಡಿಜಿಟಲ್ ಫಾರೆನ್ಸಿಕ್ ಅನಾಲಿಸ್ಟ್ ಹುದ್ದೆಗೆ 02 ಸೈಬರ್ ಸೆಕ್ಯೂರಿಟಿ ಅನಾಲಿಸ್ಟ್ ಹುದ್ದೆಗೆ ಒಟ್ಟು 08 ತಾಂತ್ರಿಕ ತಜ್ಞರನ್ನು ಪೊಲೀಸ್ ಆಯುಕ್ತರು ಬೆಂಗಳೂರು ನಗರ ಘಟಕಕ್ಕೆ ನೇಮಕ ಮಾಡಲಾಗಿರುತ್ತದೆ. ಡಿಜಿಟಲ್ ಫಾರೆನ್ಸಿಕ್ ಪ್ರಯೋಗಾಲಯಗಳು ಸೈಬರ್ ಅಪರಾಧಕ್ಕೆ ಸಂಬಂಧಿಸಿದ ಡಿಜಿಟಲ್ ಸಾಕ್ಷಿ ವಿಶ್ಲೇಷಣೆಗೆ ಸ್ಥಾಪಿಸಲಾಗಿದೆ.<br><br>➢ ಬೆಂಗಳೂರು ನಗರದಲ್ಲಿರುವ ರಾಜ್ಯ ಸೈಬರ್ ಫಾರೆನ್ಸಿಕ್ ಲ್ಯಾಬ್‌ನಲ್ಲಿ ಮೊಬೈಲ್, ನೆಟ್‌ವರ್ಕ್ ಫಾರೆನ್ಸಿಕ್ಸ್ ಹಾಗೂ ಮಾಲ್‌ವೇರ್ ವಿಶ್ಲೇಷಣಾ |

| | | |
|---|---|---|
| | | ಸಾಮರ್ಥ್ಯ, Magnet AXIOM, Belkasoft, Cellebrite UFED, Oxygen Forensic Detective ಮುಂತಾದ ಅತ್ಯಾಧುನಿಕ ಸಾಧನಗಳು. ಪ್ರಾದೇಶಿಕ ಫಾರೆನ್ಸಿಕ್ ಲ್ಯಾಬ್‌ಗಳು ಸ್ಥಳೀಯ ತನಿಖಾ ಸಾಮರ್ಥ್ಯವನ್ನು ಬಲಪಡಿಸುತ್ತವೆ. ಡೇಟಾ ರಿಕವರಿ, ಸಾಧನ ಇಮೇಜಿಂಗ್, ಸಾಕ್ಷಿ ಕಸ್ಟಡಿ ನಿರ್ವಹಣೆ ಮಾಡಲಾಗುತ್ತಿದೆ.<br><br>➢ ಸೈಬರ್ ಫೋರೆನ್ಸಿಕ್ ಸಾಮರ್ಥ್ಯ, ಡಿಜಿಟಲ್ ಫೋರೆನ್ಸಿಕ್ ಪ್ರಯೋಗಾಲಯಗಳು ಸೈಬರ್ ಅಪರಾಧಕ್ಕೆ ಸಂಬಂಧಿಸಿದ ಡಿಜಿಟಲ್ ಸಾಕ್ಷಿ ವಿಶ್ಲೇಷಣೆಗೆ ಸ್ಥಾಪಿಸಲಾಗಿದೆ.<br><br>➢ ಸೈಬರ್ ಗುಪ್ತಚರ ಮಾಹಿತಿ ವಿನಿಮಯ, ತಕ್ಷಣ ಬ್ಯಾಂಕ್ ವಂಚನೆ ಮೊತ್ತ ಸ್ಥಗಿತಗೊಳಿಸಲು, ಜಂಟಿಯಾಗಿ ಸೈಬರ್ ವಂಚನೆ ಮತ್ತು ಬೆದರಿಕೆಗೆ ಪ್ರತಿಕ್ರಿಯಿಸಲು ಮತ್ತು ಜಾಗೃತಿ ಮೂಡಿಸಲು ಐಟಿ ಕಂಪನಿಗಳು, ಬ್ಯಾಂಕುಗಳು, ಪೇಮೆಂಟ್ ಸರ್ವಿಸ್ ಪೂರೈಕೆದಾರರೊಂದಿಗೆ MoU ಗಳನ್ನು ಮಾಡಿಕೊಳ್ಳಲಾಗಿದೆ.<br><br>➢ OSINT ಉಪಕರಣಗಳ ಮೂಲಕ ಹೊಸ ಸೈಬರ್ ಅಪಾಯಗಳ ಕುರಿತು ನಿಗಾ ವಹಿಸಲಾಗಿದೆ.<br><br>➢ ಸಾಮಾಜಿಕ ಜಾಲತಾಣಗಳಲ್ಲಿ ಬಿತ್ತರಿಸಲಾಗುವ ಕಾನೂನು ಬಾಹಿರ ವಿಡಿಯೋ, ಫೋಟೋಗಳನ್ನು ತೆಗೆಯಲು I.T ಕಾಯ್ದೆಯಡಿ ಕ್ರಮ ಜರುಗಿಸಲಾಗುತ್ತಿದೆ.<br><br>➢ ಸೈಬರ್ ಅಪರಾಧ ಸಹಾಯವಾಣಿಗಳಿಗೆ "ಗೋಲ್ಡನ್ ಅವರ್" ನಲ್ಲಿ ಬರುವ ದೂರುಗಳನ್ನು ಸ್ವೀಕರಿಸಲು ಕರ್ನಾಟಕ ಪೊಲೀಸ್ ಇಲಾಖೆ 1930 ಹೆಲ್ಪ್‌ಲೈನ್ ಅನ್ನು ವೆಬ್‌ಬಾಟ್ ಸೌಲಭ್ಯದಿಂದ ಉನ್ನತೀಕರಿಸಿದೆ. ಇದರಿಂದ SMS ಮುಖಾಂತರ |

| | | |
|---|---|---|
| | | ಸ್ವಯಂ ಮಾಹಿತಿ ನೊಂದಣಿ ಮಾಡಿಕೊಳ್ಳಬಹುದಾಗಿರುತ್ತದೆ. ದೂರುಗಳನ್ನು "ಹಣಕಾಸು ಮತ್ತು ಹಣಕಾಸೇತರ" ಎಂದು ವಿಂಗಡಿಸುವ IVR ವ್ಯವಸ್ಥೆ ಕಲ್ಪಿಸಲಾಗಿರುತ್ತದೆ. ಹೆಚ್ಚು ಕರೆಗಳು ಬಂದಾಗ ಆಟೋಮೇಟೆಡ್ ಕರೆ ವ್ಯವಸ್ಥೆ ಮೂಲಕ ಧ್ವನಿ ಮಾರ್ಗದರ್ಶನ ಸೌಲಭ್ಯವಿರುತ್ತದೆ. ದೂರುದಾರರು ತಮ್ಮ ದೂರಿನ ಸ್ಥಿತಿ ಹಂತವನ್ನು ತಿಳಿದುಕೊಳ್ಳಬಹುದಾಗಿರುತ್ತದೆ. 24/7 ಕಾಲ್ ಸೆಂಟರ್ ಕರ್ತವ್ಯ ನಿರ್ವಹಿಸುತ್ತಿರುತ್ತದೆ.<br><br>**ಕೇಂದ್ರ ಮಟ್ಟದ ಸಂಯೋಜನೆ ಮತ್ತು ಮೇಲ್ವಿಚಾರಣೆ:**<br>ಭಾರತೀಯ ಸೈಬರ್ ಕ್ರೈಂ ಸಂಯೋಜನಾ ಕೇಂದ್ರ (I4C) ರಾಷ್ಟ್ರ ಮಟ್ಟದ ಸಾಮರ್ಥ್ಯ ನಿರ್ಮಾಣ, ಭೀತಿಯ ವಿಶ್ಲೇಷಣೆ ಹಾಗೂ ಕಾನೂನು ಅನುಷ್ಠಾನ ಬೆಂಬಲ ನೀಡುತ್ತದೆ. CERT-In (Computer Emergency Response Team–India) ಸೈಬರ್ ಬೆದರಿಕೆಗಳ ಬಗ್ಗೆ ಎಚ್ಚರಿಕೆ ನೀಡುತ್ತದೆ. |

**ಸಂಖ್ಯೆ: ಹೆಚ್‌ಡಿ 15 ಪಿಸಿಕ್ಯೂ 2026**

**(ಡಾ: ಜಿ. ಪರಮೇಶ್ವರ)**
**ಗೃಹ ಸಚಿವರು**

ಅನುಬಂಧ

| 2023 | | | | |
|---|---|---|---|---|
| ಕ್ರ. ಸಂ | ಘಟಕ | ಸೈಬರ್ ಪ್ರಕರಣಗಳ ಸಂಖ್ಯೆ | ಸೈಬರ್ ವಂಚನೆಯ ಮೊತ್ತ | ಸೈಬರ್ ವಂಚನೆಗೊಳಪ್ಪಟ್ಟ ಮೊತ್ತದಲ್ಲಿ ರಿಕವರಿಯಾದ ಮೊತ್ತ |
| 1 | ಬಾಗಲಕೋಟೆ ಜಿಲ್ಲೆ | 54 | 12557183 | 6139098 |
| 2 | ಬಳ್ಳಾರಿ ಜಿಲ್ಲೆ | 78 | 31440881 | 8917553 |
| 3 | ಬೆಳಗಾವಿ ನಗರ | 85 | 37675143 | 32375554 |
| 4 | ಬೆಳಗಾವಿ ಜಿಲ್ಲೆ | 93 | 39099552 | 33788744 |
| 5 | ಬೆಂಗಳೂರು ನಗರ | 17818 | 6809426152 | 903133406 |
| 6 | ಬೆಂಗಳೂರು ಜಿಲ್ಲೆ | 736 | 1174476216 | 146976575 |
| 7 | ಬೀದರ್ ಜಿಲ್ಲೆ | 40 | 17712892 | 4384263 |
| 8 | ಚಾಮರಾಜನಗರ ಜಿಲ್ಲೆ | 43 | 17476261 | 57756735 |
| 9 | ಚಿಕ್ಕಬಳ್ಳಾಪುರ ಜಿಲ್ಲೆ | 265 | 87548346 | 81507654 |
| 10 | ಚಿಕ್ಕ ಮಗಳೂರು ಜಿಲ್ಲೆ | 96 | 68206380 | 1755610 |
| 11 | ಚಿತ್ರದುರ್ಗ ಜಿಲ್ಲೆ | 64 | 49142239 | 8986867 |
| 12 | ದಕ್ಷಿಣ ಕನ್ನಡ ಜಿಲ್ಲೆ | 57 | 32408877 | 1542086 |
| 13 | ದಾವಣಗೆರೆ ಜಿಲ್ಲೆ | 109 | 56531800 | 7999266 |
| 14 | ಧಾರವಾಡ ಜಿಲ್ಲೆ | 48 | 10404972 | 5628808 |
| 15 | ಗದಗ ಜಿಲ್ಲೆ | 69 | 38978342 | 2923931 |
| 16 | ಹಾಸನ ಜಿಲ್ಲೆ | 118 | 36835038 | 5743264 |
| 17 | ಹಾವೇರಿ ಜಿಲ್ಲೆ | 113 | 29011902 | 3371048 |
| 18 | ಹುಬ್ಬಳ್ಳಿ‌ಂಧಾರವಾಡ ನಗರ | 471 | 16461365928 | 104624548 |
| 19 | ಕೆ.ಜಿ.ಎಫ್ | 122 | 45796071 | 33134252 |
| 20 | ಕಲಬುರಗಿ ನಗರ | 43 | 12799588 | 2477559 |
| 21 | ಕಲಬುರಗಿ ಜಿಲ್ಲೆ | 34 | 8415451 | 1673661 |
| 22 | ಕರ್ನಾಟಕ ರೈಲ್ವೆಸ್ | 1 | 295000 | 0 |
| 23 | ಕೊಡಗು ಮಡಿಕೇರಿ | 114 | 43102544 | 2417132 |
| 24 | ಕೋಲಾರ ಜಿಲ್ಲೆ | 69 | 54825165 | 11329733 |
| 25 | ಕೊಪ್ಪಳ ಜಿಲ್ಲೆ | 23 | 15500610 | 772600 |
| 26 | ಮಂಡ್ಯ ಜಿಲ್ಲೆ | 52 | 19050256 | 4778744 |
| 27 | ಮಂಗಳೂರು ನಗರ | 264 | 101806569 | 17312261 |
| 28 | ಮೈಸೂರು ನಗರ | 242 | 105631087 | 21178153 |
| 29 | ಮೈಸೂರು ಜಿಲ್ಲೆ | 46 | 7270600 | 358037 |
| 30 | ರಾಯಚೂರು ಜಿಲ್ಲೆ | 33 | 16658393 | 1223062 |
| 31 | ರಾಮನಗರ ಜಿಲ್ಲೆ | 151 | 60632148 | 2719883 |
| 32 | ಶಿವಮೊಗ್ಗ ಜಿಲ್ಲೆ | 68 | 45579972 | 5875325 |
| 33 | ತುಮಕೂರು ಜಿಲ್ಲೆ | 265 | 89123297 | 104411247 |
| 34 | ಉಡುಪಿ ಜಿಲ್ಲೆ | 135 | 45337980 | 3531577 |
| 35 | ಉತ್ತರ ಕನ್ನಡ ಕಾರವಾರ | 88 | 21950646 | 4430599 |
| 36 | ವಿಜಯನಗರ ಜಿಲ್ಲೆ | 17 | 5277174 | 0 |
| 37 | ವಿಜಯಪುರ ಜಿಲ್ಲೆ | 106 | 42843055 | 37798005 |
| 38 | ಯಾದಗಿರಿ ಜಿಲ್ಲೆ | 20 | 5236400 | 233721 |
| 39 | ಸಿಐಡಿ ಘಟಕ | 5 | 87501756 | 9132446 |
| ಒಟ್ಟು | | 22255 | 25844931866 | 1682343007 |

| 2024 | | | | |
|---|---|---|---|---|
| ಕ್ರ. ಸಂ | ಘಟಕ | ಸೈಬರ್ ಪ್ರಕರಣಗಳ ಸಂಖ್ಯೆ | ಸೈಬರ್ ವಂಚನೆಯ ಮೊತ್ತ | ಸೈಬರ್ ವಂಚನೆಗೊಳಪಟ್ಟ ಮೊತ್ತದಲ್ಲಿ ರಿಕವರಿಯಾದ ಮೊತ್ತ |
| 1 | ಬಾಗಲಕೋಟೆ ಜಿಲ್ಲೆ | 48 | 56297529 | 12163395 |
| 2 | ಬಳ್ಳಾರಿ ಜಿಲ್ಲೆ | 119 | 163814642 | 39867550 |
| 3 | ಬೆಳಗಾವಿ ನಗರ | 107 | 121524022 | 69202092 |
| 4 | ಬೆಳಗಾವಿ ಜಿಲ್ಲೆ | 72 | 9090701691 | 48440121 |
| 5 | ಬೆಂಗಳೂರು ನಗರ | 17865 | 18417330549 | 1888206399 |
| 6 | ಬೆಂಗಳೂರು ಜಿಲ್ಲೆ | 763 | 1057835111 | 179855313 |
| 7 | ಬೀದರ್ ಜಿಲ್ಲೆ | 45 | 16447877 | 823480 |
| 8 | ಚಾಮರಾಜನಗರ ಜಿಲ್ಲೆ | 32 | 18996071 | 12496360 |
| 9 | ಚಿಕ್ಕಬಳ್ಳಾಪುರ ಜಿಲ್ಲೆ | 202 | 117929615 | 135818447 |
| 10 | ಚಿಕ್ಕ ಮಗಳೂರು ಜಿಲ್ಲೆ | 103 | 18368654 | 1788781 |
| 11 | ಚಿತ್ರದುರ್ಗ ಜಿಲ್ಲೆ | 81 | 69476410 | 25690918 |
| 12 | ದಕ್ಷಿಣ ಕನ್ನಡ ಜಿಲ್ಲೆ | 115 | 86660073 | 8318748 |
| 13 | ದಾವಣಗೆರೆ ಜಿಲ್ಲೆ | 144 | 226902228 | 12076573 |
| 14 | ಧಾರವಾಡ ಜಿಲ್ಲೆ | 68 | 23477181 | 14607593 |
| 15 | ಗದಗ ಜಿಲ್ಲೆ | 71 | 66440226 | 10453467 |
| 16 | ಹಾಸನ ಜಿಲ್ಲೆ | 141 | 127932517 | 27640319 |
| 17 | ಹಾವೇರಿ ಜಿಲ್ಲೆ | 131 | 29011902 | 3371048 |
| 18 | ಹುಬ್ಬಳ್ಳಿಧಾರವಾಡ ನಗರ | 250 | 339560408 | 199055903 |
| 19 | ಕೆ.ಜಿ.ಎಫ್ | 100 | 45796071 | 33134252 |
| 20 | ಕಲಬುರಗಿ ನಗರ | 44 | 48988835 | 8938101 |
| 21 | ಕಲಬುರಗಿ ಜಿಲ್ಲೆ | 35 | 22369179 | 5534248 |
| 22 | ಕರ್ನಾಟಕ ರೈಲ್ವೆಸ್ | 2 | 10000 | 0 |
| 23 | ಕೊಡಗು ಮಡಿಕೇರಿ | 90 | 88643996 | 6429855 |
| 24 | ಕೋಲಾರ ಜಿಲ್ಲೆ | 65 | 74880590 | 25791699 |
| 25 | ಕೊಪ್ಪಳ ಜಿಲ್ಲೆ | 39 | 19864102 | 250000 |
| 26 | ಮಂಡ್ಯ ಜಿಲ್ಲೆ | 78 | 40964968 | 1704552 |
| 27 | ಮಂಗಳೂರು ನಗರ | 149 | 409653057 | 63689893 |
| 28 | ಮೈಸೂರು ನಗರ | 274 | 478742931 | 68823912 |
| 29 | ಮೈಸೂರು ಜಿಲ್ಲೆ | 59 | 36903496 | 367714 |
| 30 | ರಾಯಚೂರು ಜಿಲ್ಲೆ | 32 | 84315159 | 6366783 |
| 31 | ರಾಮನಗರ ಜಿಲ್ಲೆ | 212 | 152773777 | 4998814 |
| 32 | ಶಿವಮೊಗ್ಗ ಜಿಲ್ಲೆ | 139 | 126192165 | 30119927 |
| 33 | ತುಮಕೂರು ಜಿಲ್ಲೆ | 332 | 252780668 | 125356055 |
| 34 | ಉಡುಪಿ ಜಿಲ್ಲೆ | 222 | 20449711.4 | 14054679 |
| 35 | ಉತ್ತರ ಕನ್ನಡ ಕಾರವಾರ | 111 | 7,48,50,022 | 11721229 |
| 36 | ವಿಜಯನಗರ ಜಿಲ್ಲೆ | 29 | 20759053 | 99000 |
| 37 | ವಿಜಯಪುರ ಜಿಲ್ಲೆ | 86 | 216395262 | 169812954 |
| 38 | ಯಾದಗಿರಿ ಜಿಲ್ಲೆ | 24 | 18146509 | 5997830 |
| 39 | ಸಿಐಡಿ ಘಟಕ | 3 | 426088778 | 48395266 |
| | ಒಟ್ಟು | 22482 | 32633425013 | 3321463270 |

| 2025 | | | | |
|---|---|---|---|---|
| ಕ್ರ. ಸಂ | ಘಟಕ | ಸೈಬರ್ ಪ್ರಕರಣಗಳ ಸಂಖ್ಯೆ | ಸೈಬರ್ ವಂಚನೆಯ ಮೊತ್ತ | ಸೈಬರ್ ವಂಚನೆಗೊಳಪಟ್ಟ ಮೊತ್ತದಲ್ಲಿ ರಿಕವರಿಯಾದ ಮೊತ್ತ |
| 1 | ಬಾಗಲಕೋಟೆ ಜಿಲ್ಲೆ | 41 | 169534163 | 10282324 |
| 2 | ಬಳ್ಳಾರಿ ಜಿಲ್ಲೆ | 93 | 106828768 | 15066340 |
| 3 | ಬೆಳಗಾವಿ ನಗರ | 104 | 89314606 | 20770624 |
| 4 | ಬೆಳಗಾವಿ ಜಿಲ್ಲೆ | 85 | 85134747 | 16396404 |
| 5 | ಬೆಂಗಳೂರು ನಗರ | 10668 | 17566462659 | 814882580 |
| 6 | ಬೆಂಗಳೂರು ಜಿಲ್ಲೆ | 444 | 525832845 | 38199479 |
| 7 | ಬೀದರ್ ಜಿಲ್ಲೆ | 43 | 47462415 | 263000 |
| 8 | ಚಾಮರಾಜನಗರ ಜಿಲ್ಲೆ | 35 | 21377078 | 3348394 |
| 9 | ಚಿಕ್ಕಬಳ್ಳಾಪುರ ಜಿಲ್ಲೆ | 222 | 175478792 | 75607278 |
| 10 | ಚಿಕ್ಕ ಮಗಳೂರು ಜಿಲ್ಲೆ | 94 | 85658278 | 6583831 |
| 11 | ಚಿತ್ರದುರ್ಗ ಜಿಲ್ಲೆ | 71 | 57414444 | 4133486 |
| 12 | ದಕ್ಷಿಣ ಕನ್ನಡ ಜಿಲ್ಲೆ | 138 | 141306560 | 19567563 |
| 13 | ದಾವಣಗೆರೆ ಜಿಲ್ಲೆ | 115 | 141584800 | 18256401 |
| 14 | ಧಾರವಾಡ ಜಿಲ್ಲೆ | 51 | 25411869 | 9132156 |
| 15 | ಗದಗ ಜಿಲ್ಲೆ | 63 | 53494597 | 8643087 |
| 16 | ಹಾಸನ ಜಿಲ್ಲೆ | 96 | 91501314 | 61374107 |
| 17 | ಹಾವೇರಿ ಜಿಲ್ಲೆ | 100 | 70517906 | 10663659 |
| 18 | ಹುಬ್ಬಳ್ಳಿಂಧಾರವಾಡ ನಗರ | 191 | 287555002 | 47478524 |
| 19 | ಕೆ.ಜಿ.ಎಫ್ | 77 | 48222642 | 26310768 |
| 20 | ಕಲಬುರಗಿ ನಗರ | 56 | 129283828 | 20142373 |
| 21 | ಕಲಬುರಗಿ ಜಿಲ್ಲೆ | 30 | 13161320 | 421775 |
| 22 | ಕರ್ನಾಟಕ ರೈಲ್ವೆಸ್ | 11 | 823150 | 97000 |
| 23 | ಕೊಡಗು ಮಡಿಕೇರಿ | 77 | 100318001 | 7838690 |
| 24 | ಕೋಲಾರ ಜಿಲ್ಲೆ | 78 | 46717874 | 4993259 |
| 25 | ಕೊಪ್ಪಳ ಜಿಲ್ಲೆ | 26 | 29284939 | 2132907 |
| 26 | ಮಂಡ್ಯ ಜಿಲ್ಲೆ | 82 | 56132221 | 1409538 |
| 27 | ಮಂಗಳೂರು ನಗರ | 148 | 372872007 | 38198699 |
| 28 | ಮೈಸೂರು ನಗರ | 195 | 439575846 | 49652393 |
| 29 | ಮೈಸೂರು ಜಿಲ್ಲೆ | 69 | 56947985 | 2285937 |
| 30 | ರಾಯಚೂರು ಜಿಲ್ಲೆ | 25 | 62891628 | 1374658 |
| 31 | ರಾಮನಗರ ಜಿಲ್ಲೆ | 229 | 112416762 | 10772631 |
| 32 | ಶಿವಮೊಗ್ಗ ಜಿಲ್ಲೆ | 158 | 209912817 | 21873884 |
| 33 | ತುಮಕೂರು ಜಿಲ್ಲೆ | 272 | 160333156 | 35615425 |
| 34 | ಉಡುಪಿ ಜಿಲ್ಲೆ | 198 | 232548466 | 16499307 |
| 35 | ಉತ್ತರ ಕನ್ನಡ ಕಾರವಾರ | 68 | 139003595 | 5029871 |
| 36 | ವಿಜಯನಗರ ಜಿಲ್ಲೆ | 39 | 28570793 | 330837 |
| 37 | ವಿಜಯಪುರ ಜಿಲ್ಲೆ | 371 | 141101633 | 54969149 |
| 38 | ಯಾದಗಿರಿ ಜಿಲ್ಲೆ | 24 | 19830212 | 2582357 |
| 39 | ಸಿಐಡಿ ಘಟಕ | 2 | 1088568281 | 94086470 |
| ಒಟ್ಟು | | 14889 | 23230387999 | 1577267165 |